## ನಗೆ ನವನವೀನ

ಈ ಸಂಚಿಕೆಯ (ಏ. 8) ಎಲ್ಲಾ ಹಾಸ್ಯ ಲೇಖನಗಳು ಮತ್ತು ಅದಕ್ಕಾಗಿ ರಚಿಸಿದ ಚಿತ್ರಗಳು ತುಂಬಾ ಚೆನ್ನಾಗಿ ಮೂಡಿಬಂದಿವೆ. ಅದರಲ್ಲೂ 'ಆನ್‌ಲೈನ್ ಶಿಷ್ಯನ ಅನ್‌ಲಿಮಿಟೆಡ್ ಅವಾಂತರ' (ಎನ್. ರಾಮನಾಥ) ಲೇಖನ ನಕ್ಕು ನಗಿಸಿತು. ಈಗಿನ ಮಕ್ಕಳು ಮೊಬೈಲ್‌ನಿಂದಲೇ ಸಿಕ್ಕಾಪಟ್ಟೆ ತರ್ಲೆ ವಿಷಯಗಳನ್ನು ತಿಳಿದುಕೊಂಡಿರುತ್ತಾರೆ ಹಾಗೂ ಅದನ್ನು ಥಟ್ ಅಂತ ತಿರುಗಿ ಹೇಳುತ್ತಾರೆ. ಇಂತಹ ಮಕ್ಕಳಿಂದ ಮನರಂಜನೆ ಸಿಕ್ಕರೂ ಶಿಕ್ಷಕರು ಮತ್ತು ಪಾಲಕರು ಇಕ್ಕಟ್ಟಿಗೆ ಸಿಲುಕುವಂತಾಗುತ್ತದೆ. 'ಕಪ್ಪು ಚಿರತೆಯ ಹಾದಿಯಲ್ಲಿ....' (ಲೋಕೇಶ್ ಮೊಸಳೆ) ಲೇಖನದ ಜೊತೆ ಫೋಟೊಗಳು ಚೆನ್ನಾಗಿವೆ.

—ಬಿ. ಶೋಭಾ ಅರಸ, ತೆಕ್ಕಟ್ಟೆ

ಏ. 8ರ 'ನಗೆ ನವನವೀನ' ಸಂಚಿಕೆ ಚೆನ್ನಾಗಿದೆ. ಕೊರೊನಾ ಸಂಕಟಗಳು ಮರೆತುಹೋಗುವಂತೆ ಮಾಡಿದ 'ಕಾಸಿದ್ರೆ ಕೈಲಾಸ', 'ಆನ್ಲೈನ್ ಶಿಷ್ಯನ ಅನ್‌ಲಿಮಿಟೆಡ್ ಅವಾಂತರ', ಹಾಸ್ಯ ಲೇಖನಗಳು ಹೊಟ್ಟೆ ಹುಣ್ಣಾಗುವಂತೆ ನಗಿಸಿದವು. 'ಸುಧಾ'ಳ ಈ ನಗೆಯ ನವನವೀನ ನಗುಮುಖ ಬಹಳವೇ ಸಂತಸ ತಂದಿತು.

—ಸುಮನಾ

ಸುಧಾಳಿಗೂ/ ಬಳಗಕ್ಕೂ ನಗೆಯ ನವನವೀನ ನಮಸ್ಕಾರಗಳು. ಎಂದಿನಂತೆ ಎಲ್ಲ ಲೇಖನಗಳು ಚೆನ್ನಾಗಿ ಮೂಡಿಬಂದಿವೆ. ನಿಮಗೂ, ಎಲ್ಲ ಲೇಖಕರಿಗೂ ಅಭಿನಂದನೆಗಳು. ಎಂ. ಎಸ್. ನರಸಿಂಹಮೂರ್ತಿ ಅವರ 'ಕಾಸಿದ್ರೆ ಕೈಲಾಸ' ಮತ್ತು ಎನ್. ರಾಮನಾಥ್ ಅವರ 'ಆನ್‌ಲೈನ್ ಶಿಷ್ಯನ ಅನ್ ಲಿಮಿಟೆಡ್ ಅವಾಂತರ' ಹೊಟ್ಟೆ ಹುಣ್ಣಾಗುವಷ್ಟು ನಗಿಸಿತು. ಇದನ್ನು ಬರೆಯುವಾಗಲೂ ನಗುತ್ತಲೇ ಬರೆಯುತ್ತಿರುವೆ. ಪ್ರಸಕ್ತ ವಿದ್ಯಮಾನಗಳನ್ನು ಲೇಖಕರು ಬಹಳ ಚೆನ್ನಾಗಿ ನಿರೂಪಣೆ ಮಾಡಿದ್ದಾರೆ. ಲೇಖನಗಳಿಗೆ ಸೂಕ್ತ ಚಿತ್ರಗಳನ್ನು ಬರೆದ ಚಿತ್ರಕಾರರಿಗೂ ಹಾರ್ದಿಕ ಹಾಸ್ಯದ ಅಭಿನಂದನೆಗಳು.

—ಕಮಲಾದೇವಿ ಆರ್. ಎಚ್., ಬೆಂಗಳೂರು

'ಕಾಸಿದ್ರೆ ಕೈಲಾಸ' ಲೇಖನದಲ್ಲಿ ಲೇಖಕರು ಪ್ರಸ್ತುತ ರಾಜಕೀಯ ವಿದ್ಯಮಾನವನ್ನು ವಿಡಂಬನಾತ್ಮಕವಾಗಿ ಟೀಕಿಸಿದ ಪರಿ, ಸುದ್ದಿವಾಹಿನಿಗಳ ಅಸಹನೀಯ ವಿಶ್ಲೇಷಣೆಯಿಂದ ಬೇಸತ್ತಿದ್ದ ಮನಸ್ಸುಗಳಿಗೆ ಕೊಂಚಮಟ್ಟಿಗೆ ನಗು ಮೂಡಿಸಿದೆ. ಈ ನಗೆ ನವನವೀನ ಮುಂದುವರೆದರೆ ಓದುವ ಮನಸ್ಸುಗಳಿಗೆ ಪ್ರತಿ ವಾರವೂಖ ಕಚಗುಳಿ ಗ್ಯಾರಂಟಿ.

—ಆಕಸ್ಮಿತ, ಶಿವಮೊಗ್ಗ

ಎನ್. ರಾಮನಾಥ್ ಅವರ 'ಆನ್‌ಲೈನ್ ಶಿಷ್ಯನ ಅನ್ ಲಿಮಿಟೆಡ್ ಅವಾಂತರ' ಲೇಖನ ಸಾಕಷ್ಟು ನಕ್ಕು ನಗಿಸಿತು. ಮನೆ ಮಂದಿಯೆಲ್ಲರೂ ಓದಿ ಸಂತೋಷಗೊಂಡರು. ಪ್ರಶ್ನೋತ್ತರದಿಂದ ಕೂಡಿರುವ ಬರಹ ಸೂಪರ್. ಎರಡು ಮೂರು ಸಾರಿ ಓದಿ ಖುಷಿಪಟ್ಟೆ. ನಮ್ಮ ಆಫೀಸ್‌ನಲ್ಲಿ ಸಹೋದ್ಯೋಗಿಗಳೂ ಓದಿ ಮೆಚ್ಚಿಕೊಂಡರು.

—ವಿ. ಹೇಮಂತ ಕುಮಾರ್, ಬೆಂಗಳೂರು

## ಕುಂಭಕರ್ಣನೆಂಬ ಕದನಕಲಿ...

ಏ.8ರ ಸಂಚಿಕೆಯಲ್ಲಿ ಜಿ ಕೃಷ್ಣಪ್ಪ ಅವರು ಬರೆದಿರುವ 'ಕುಂಭಕರ್ಣನೆಂಬ ಕದನಕಲಿ..' ಲೇಖನ ಓದಿದೆ. ಶ್ರೀರಾಮಾಯಣ ದರ್ಶನಂನ ಕುಂಭಕರ್ಣ ಪಾತ್ರವು ರಣರಂಗದಲ್ಲಿ ಕಂಡುಬರುವ ಗಂಭೀರತೆಯನ್ನೂ ತಿಳಿಹಾಸ್ಯದಲ್ಲಿ ಕಟ್ಟಿಕೊಡಲಾಗಿದೆ. ಪಾತ್ರದ ಸುತ್ತಲೂ ಹೆಣೆದಿರುವ ಕುತೂಹಲಗಳು ಸಾಹಸಮಯವಾಗಿದ್ದರೂ ಕಪಿದ್ವಜರ ಶಕ್ತಿಯ ತೀವ್ರತೆಯೂ ಅಭಿವ್ಯಕ್ತವಾಗಿದೆ. ಕುವೆಂಪು ಭಾಷೆಯನ್ನು ದೈನಂದಿನ ನುಡಿಯಲ್ಲಿ ಕೃಷ್ಣಪ್ಪನವರು ಸರಳವಾಗಿ ಅರ್ಥೈಸಿದ್ದಾರೆ.

—ರವಿಶಂಕರ್ ಎ.ಕೆ.



## ಉತ್ತಮ ಸಂಚಿಕೆ

ವಾರ ವಾರ 'ಸುಧಾ' ಪತ್ರಿಕೆ ಹಲವಾರು ಉಪಯುಕ್ತ ವಿಷಯಗಳನ್ನೊಳಗೊಂಡು ಸರ್ವಾಂಗ ಸುಂದರಿಯಾಗಿ ಬೆಳಕುತ್ತ ಬರುತ್ತಿದ್ದಾಳೆ. ಏ. 8ರ ಸಂಚಿಕೆಯ ಪ್ರಾರಂಭದ ಪುಟಗಳಲ್ಲೇ ಕಾಣಿಸಿಕೊಳ್ಳುವ 'ಪಾಲನೆ ಪೋಷಣೆ'ಯಲ್ಲಿ ಕಾಣಿಸಿದ 'ಮಕ್ಕಳಿಗೆ ಮೊಬೈಲ್ ಬಳಕೆಯ ಪಾಠ' ಸಂದರ್ಭೋಚಿತವಾಗಿ ಮೂಡಿ ಬಂದಿದೆ. ಸಮಾಜಕ್ಕೆ ಒಂದು ಒಳ್ಳೆಯ ಸಂದೇಶವನ್ನು ನೀಡುತ್ತದೆ. ಹಾಗೆಯೇ, 'ಹಲ್ಲು ಬಿಡಿ ಪ್ಲೀಜ್' ಮತ್ತು 'ಕುಂಭಕರ್ಣನೆಂಬ ಕದನಕಲಿ ರಣರಂಗದಲ್ಲಿ ಹಾಸ್ಯದೋಕುಳಿ' ಲಲಿತ ಲೇಖನಗಳು ಓದುಗರನ್ನು ಸೆಳೆಯುತ್ತವೆ.

—ಸರಸ್ವತಿ ಭೋಸಲೆ

## ಆರೋಗ್ಯದ ನಂದಾದೀಪ

ಏ. 8ರ ಸಂಚಿಕೆಯಲ್ಲಿ ಉಮಾ ಅನಂತ ಬರೆದಿರುವ 'ಆರೋಗ್ಯದ ನಂದಾದೀಪ' ಲೇಖನ ಉತ್ತಮವಾಗಿತ್ತು. ಕೊರೊನಾ ಕರಿನೆರಳಿನಲ್ಲಿ ಭಯಭೀತರಾಗಿರುವ ದಿನಗಳಲ್ಲಿ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅಗತ್ಯ.

—ಕೊಟ್ಟೂರು ರಾಜಶೇಖರ ಗೌಡ, ಹರಪನಹಳ್ಳಿ

## ಗುಲಾಬಿಗೆ ಹೊಸ ಬಣ್ಣ

ಏ. 8ರ ಸಂಚಿಕೆಯಲ್ಲಿ ಸಿ.ಎಸ್. ನಿರ್ವಾಣ ಸಿದ್ದಯ್ಯ ಅವರು ಬರೆದಿರುವ 'ಗುಲಾಬಿಗೆ ಹೊಸ ಬಣ್ಣ' ಓದಿದೆ. ಐಐಎಚ್‌ಆರ್ ತಂಡದ ಸದಸ್ಯರಿಗೆ ಅಭಿನಂದನೆಗಳು.

—ಎಸ್. ಶಂಕರ್ ರಾವ್, ಕೊಚ್ಚಿನ್



## ಶಿವ ಸಮೀಕರಣ

ಏ. 18ರ ಸಂಚಿಕೆಯಲ್ಲಿ ಮಹತಿ ಅವರು ಬರೆದಿರುವ 'ಶಿವ ಸಮೀಕರಣ' ಲೇಖನ ಅದ್ಭುತವಾಗಿತ್ತು. ಬರವಣಿಗೆಯ ಶೈಲಿ ಮೋಡಿ ಮಾಡುವಂಥದ್ದು, ಕಣ್ಣು ತೆರೆಸುವಂಥದ್ದು. ಇಂಥ ಲೇಖನಗಳನ್ನು ಹೆಚ್ಚು ಹೆಚ್ಚು ಪ್ರಕಟಿಸಿ.

—ಆಶಾ ಲತಾ

## ಹೃದಯಂಗಮ ಕಥೆ

ಏ. 15ರ ಸಂಚಿಕೆಯಲ್ಲಿ ಬಿದಲೋಟಿ ರಂಗನಾಥ ಬರೆದಿರುವ 'ಬುದ್ಧ ಜಂಗಮ' ಕಥೆ ಚೆನ್ನಾಗಿದೆ. ಎದೆ ತಿದಿ ಒತ್ತಿ; ಮತ್ತದೇ ನೋವನ್ನು ಜತನದಿಂದ ಹೆಕ್ಕಿ, ಸಿಕ್ಕು ಬಿಡಿಸಿ ವಿಸ್ತಾರದ ಬಯಲಿಗೆ ಸುರಿವ, ಕದಲಿಸುವ ಈ ಕಥೆ ಹೃದಯಂಗಮವಾಗಿದೆ. ಬುದ್ಧನನ್ನು ಸಮಕಾಲೀನಗೊಳಿಸುವ ಇಂಥ ಪ್ರಯತ್ನಗಳು ನಮ್ಮ ಇಂದಿನ ಹಲವು ಸಮಸ್ಯೆಗಳಿಗೆ ಪರಿಹಾರದ ದಾರಿಯನ್ನು ಸೂಚಿಸುವ ಹಾಗಿವೆ. ಇಂಥ ಕಥೆಗಳನ್ನು ಇನ್ನಷ್ಟು ಪ್ರಕಟಿಸಿ.

—ಪುರುಷೋತ್ತಮ ರೆಡ್ಡಿ ಕೆ., ಪಾವಗಡ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in